# ಕುವೆಂಪು ವಿಶ್ವವಿದ್ಯಾಲಯ

Accredited by NAAC with "A" Grade, Ranked 73rd Place in NIRF-2019 & 45th Place at National Level SCIMAGO Ranking

**ಕಾಲೇಜು ಅಭಿವೃದ್ಧಿ ಪರಿಷತ್ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451**

ದೂರವಾಣಿ : 08282 – 256301–256308 ವೆಬ್‌ಸೈಟ್ : www.kuvempu.ac.in ಇ–ಮೇಲ್ :cdckuvempu@gmail.com


ಸಂಖ್ಯೆ:ಕುವಿ:ಸಿಡಿಸಿ–1: 370 :2023–24 ದಿನಾಂಕ: 22/08/2023

## ಸುತ್ತೋಲೆ

ವಿಷಯ:–ಸಂಯೋಜನೆ ಶುಲ್ಕ ಪಾವತಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವ ಬಗ್ಗೆ.

-----

ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗದ ಅಡಿಟ್ ತಪಾಸಣೆ ಕಾರ್ಯವು ನಡೆಯುತ್ತಿದ್ದು, ಲೆಕ್ಕಪತ್ರಗಳ ತಪಾಸಣೆ ಕಾರ್ಯದಲ್ಲಿ ಕಾಲೇಜುಗಳ ಸಂಯೋಜನೆ : ಮರುತಪಾಸಣೆ : ಹೆಚ್ಚುವರಿ ವಿದ್ಯಾರ್ಥಿಗಳ ಪ್ರವೇಶಾತಿ ಕುರಿತ : ಶಿಕ್ಷಣ ಕಾಲೇಜುಗಳ ಪ್ರಾಚಾರ್ಯರ/ಉಪನ್ಯಾಸಕರ ತಾತ್ಕಾಲಿಕ ನೇಮಕಾತಿ ಅನುಮೋದನೆ ಶುಲ್ಕಗಳನ್ನು ಪರಿಶೀಲಿಸಲಾಗುತ್ತದೆ. ಶುಲ್ಕಗಳನ್ನು ನೆಫ್ಟ್ , ಆರ್.ಟಿ.ಜಿ.ಎಸ್. ಆನ್‌ಲೈನ್ ಮೂಲಕ ಮತ್ತು ಚಲನ್‌ಗಳ ಮೂಲಕ ಪಾವತಿಸಲಾಗುತ್ತಿದ್ದು, ಕೆಲವು ಕಾಲೇಜುಗಳು ಜಮಾ ಮಾಡುವ ಮೊತ್ತವು ಬ್ಯಾಂಕ್ ಸ್ಕ್ರೋಲ್‌ನಲ್ಲಿ ಶುಲ್ಕವನ್ನು ಜಮಾ ಮಾಡುವ ಸಂಸ್ಥೆಯ ಹೆಸರು ನಮೂದಾಗದೇ ಇರುವುದರಿಂದ ಇಂತಹುದೇ ಕಾಲೇಜುಗಳಿಂದ ಜಮೆಯಾದ ಮೊತ್ತ ಎಂದು ಗುರುತಿಸಿ ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯ ಮಾಡುವಲ್ಲಿ ತೊಂದರೆಯಾಗುತ್ತಿದೆ ಮತ್ತು ಆಡಿಟ್ ಆಕ್ಷೇಪಣೆಗೊಳಪಡುತ್ತಿದೆ. ಇದರಿಂದ ಆಡಿಟ್ ವಿಭಾಗವು ಸ್ಪಷ್ಟೀಕರಣ/ವಿವರಣೆಯನ್ನು ಕೋರಿ ಹೆಸರು ನಮೂದಾಗದೆ ಇರುವ ಸಂಸ್ಥೆಗಳ ಶುಲ್ಕವು ಪಾವತಿಯಾಗಿರುವುದಿಲ್ಲವೆಂದು ಒಟ್ಟಾರೆ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗುತ್ತಿದ್ದು, ಆಡಿಟ್ ಆಕ್ಷೇಪಣೆ ಹಾಗೆಯೇ ಉಳಿದುಕೊಂಡು ವಿಶ್ವವಿದ್ಯಾಲಯಕ್ಕೆ ತೊಂದರೆಯಾಗುತ್ತಿದೆ.

ಸಂಬಂಧಿಸಿದ ಶುಲ್ಕಗಳನ್ನು ವಿಶ್ವವಿದ್ಯಾಲಯದ ಸಂಯೋಜನೆ ಖಾತೆ ಸಂಖ್ಯೆ 54023035811 ಕ್ಕೆ ಬ್ಯಾಂಕ್‌ಗೆ ಜಮೆ ಮಾಡುವ ಸಂದರ್ಭದಲ್ಲಿ **ನಗದಾಗಿ ಪಾವತಿಸದೆ ಇರುವ ಸಂದರ್ಭದಲ್ಲಿ** ಸಂಸ್ಥೆಯಿಂದ ಬ್ಯಾಂಕಿನ ವ್ಯವಸ್ಥಾಪಕರಿಗೆ Your Self ಧನಾದೇಶವನ್ನು ನೀಡಿದಾಗ ಬ್ಯಾಂಕಿನವರು ಸದರಿ ಖಾತೆಗೆ ಮೊತ್ತವನ್ನು ಜಮೆ ಮಾಡಿದಾಗ ವಿಶ್ವವಿದ್ಯಾಲಯದ ಬ್ಯಾಂಕ್ ಸ್ಕ್ರೋಲ್‌ನಲ್ಲಿ ಧನಾದೇಶ ಸಂಖ್ಯೆ ಮಾತ್ರ ನಮೂದಾಗುತ್ತದೆ.

ಈ ಹಿನ್ನಲೆಯಲ್ಲಿ **ಇನ್ನು ಮುಂದೆ ಕಡ್ಡಾಯವಾಗಿ ಸಂಸ್ಥೆಯು ಶುಲ್ಕವನ್ನು ಪಾವತಿಸುವ ಖಾತೆ ಸಂಖ್ಯೆ , ಧನಾದೇಶ ಸಂಖ್ಯೆಯನ್ನು ಮತ್ತು ಯು.ಟಿ.ಆರ್. ಸಂಖ್ಯೆಯುಳ್ಳ ಬ್ಯಾಂಕ್ ಖಾತೆಯ ವಿವರವುಳ್ಳ ಪಾಸ್‌ಪುಸ್ತಕದ ಮುಖಪುಟದ ಮತ್ತು ಶುಲ್ಕ ಪಾವತಿಗೆ ಸಂಬಂಧಿಸಿದ ಬ್ಯಾಂಕ್ ವ್ಯವಹಾರದ ತ:ಖ್ತೆಯ ನೆರಳಚ್ಚು ಪ್ರತಿಯನ್ನು ಪ್ರಾಂಶುಪಾಲರ ಮುದ್ರೆ ಮತ್ತು ಸಹಿಯೊಂದಿಗೆ ಶುಲ್ಕದ ಚಲನ್ ಅಥವಾ ಸ್ವೀಕೃತಿಗಳ ಜೊತೆ ಲಗತ್ತಿಸಿ ಕಳುಹಿಸಲು** ತಿಳಿಸಲಾಗಿದೆ.

ನಿರ್ದೇಶಕರು
ಕಾಲೇಜು ಅಭಿವೃದ್ಧಿ ಪರಿಷತ್
ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ–577 451

ಗೆ :

**ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಕಾಲೇಜುಗಳು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳು.**

ಪ್ರತಿಗಳು :

1) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2) ಸಂಯೋಜನಾಧಿಕಾರಿ, ಯು.ಸಿ.ಸಿ.ಎಫ್., ಮತ್ತು ಐ.ಟಿ. ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. – **ಸದರಿ ಸುತ್ತೋಲೆಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.**
3) ಸಿಡಿಸಿ–2, 3, ವಿಷಯ ನಿರ್ವಾಹಕರು, ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4) ಕಛೇರಿ ಪ್ರತಿ.